(ಇಂದು ದಿನಾಂಕ 17-01-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಎ.ಜಿ.ಹೆಚ್. ವಕೀಲರಿಂದಃ**

ನಾನು ಸಾಕ್ಷಿಗಳ ಹೇಳಿಕೆಯನ್ನು ಮತ್ತು ಗಾಯಾಳುವಿನ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ನಾನು ವಾಹನದ ಮಾಲಿಕರಿಗೆ ಮತ್ತು ಚಾಲಕನಿಗೆ ನೋಟಿಸನ್ನು ಕೊಟ್ಟಿಲ್ಲ. ನಾನು ಇಬ್ಬರ ಪ್ರತ್ಯಕ್ಷದರ್ಶಿಗಳನ್ನು ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ಸದರಿಯವರು ತಮ್ಮ ಹೇಳಿಕೆಯಲ್ಲಿ ಯಾವುದೋ ಕಾರ್ ಅಪಘಾತಪಡಿಸಿದೆ ಎಂದು ಹೇಳಿದ್ದಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಎದುರುದಾರರ ಪರ ವಕೀಲರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎ.ಜಿ.ಹೆಚ್. ವಕೀಲರಿಂದಃ**

ವಾಹನದ ಸರಿಯಾದ ತನಿಖೆ ಮಾಡದೇ ಗಾಯಾಳುವಿಗೆ ಸಹಾಯ ಮಾಡಲು ಈ ವಾಹನವನ್ನು ನಾವು ಸೇರಿಸಿದ್ದೇವೆ ಅನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲು ಗೈರು-ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ, ಕಾರವಾರ